ವಿಸ್ತರಣೆ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೂ ಸಹ ಆ ಬಡ್ಡಿಯನ್ನೂ ಮನ್ನಾ ಮಾಡುವ ಬಗ್ಗೆ ಬೇಕಾದ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ಮಾಡಿ ಇದಕ್ಕೆ ಸ್ಪಷ್ಟವಾದ ಉತ್ತರಬೇಕೆಂಬ ಒತ್ತಾಯವನ್ನು ಮಾಡುತ್ತಾ ಅನಿವಾರ್ಯವಾಗಿ ನಾವೆಲ್ಲರೂ ವೆಲ್‌ಗೆ ಹೋಗಬೇಕಾಗುತ್ತದೆ ಸ್ವಾಮಿ. ನಮಗೆ ಬೇರೆ ದಾರಿಯಿಲ್ಲ ಸ್ವಾಮಿ, ಈ ರೀತಿಯ ಉತ್ತರ ತೆಗೆದುಕೊಂಡು ವಾಪಸ್ಸು ಹೋಗುವುದಕ್ಕೆ ಅಂತಹ ಸ್ಥಿತಿಯಲ್ಲಿ ನಾವಿಲ್ಲಾ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಗೆ ಬಂದುರು)

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಸ್ವಲ್ಪ ಮಾತನಾಡುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ತಾವು ಬನ್ನಿ ಸಾರ್.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :– ಮಾನ್ಯ ಉಪಾಧ್ಯಕ್ಷರೆ, ರೈತರ ಬಗ್ಗೆ ನಮಗೆ ಕಳಕಳಿ ಇರುವುದರಿಂದಲೇ ಅವರಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಬೇಕೆಂಬ ಆ ಕಾರಣಕ್ಕೋಸ್ಕರವೇ ಈ ಒಂದು ಕೆಲವು ಸೌಲಭ್ಯಗಳನ್ನು ಅವರಿಗೆ ಕೊಡತಕ್ಕಂತಹ ಕೆಲಸವನ್ನು ಮಾಡಿರುವುದು. ಇದರಿಂದ ರಾಜಕಾರಣ ಮಾಡುವುದರಿಂದ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ರಾಜಕಾರಣಕ್ಕೋಸ್ಕರವಾಗಿ ಮಾತನಾಡುವುದು, ರಾಜಕಾರಣಕ್ಕೋಸ್ಕರವಾಗಿ ಪ್ರಚಾರಕ್ಕೋಸ್ಕರವಾಗಿ ಮಾತನಾಡುವುದರಿಂದ ಅದು ರೈತರಿಗೆ ಏನೂ ಸೌಲಭ್ಯಗಳು ಸಿಗುವುದಿಲ್ಲ. ನಾನು ಇನ್ನು ಉತ್ತರವನ್ನೇ ಕೊಟ್ಟಿಲ್ಲ. ಆಗಲೇ ನೀವು ವೆಲ್‌ಗೆ ಬಂದುಬಿಟ್ಟಿದ್ದೀರಿ. ಈಗ 40 ಪರ್ಸೆಂಟ್ ಸಾಲವನ್ನು ಯಾರು ತೀರಿಸಿದ್ದಾರೆ. ಮತ್ತೆ ಅವರಿಗೆ 6 ಪರ್ಸೆಂಟ್ ದರದಲ್ಲಿ ಹೊಸದಾಗಿ ಮತ್ತೆ ಸಾಲ ಸಿಗುತ್ತದೆ. ಯಾರು ಸಾಲವನ್ನು ಕಟ್ಟುವುದಿಲ್ಲ ಅವರಿಗೆ ಆ ಸೌಲಭ್ಯವೇ ಬೇಡವೆಂಬುದು ನಿಮ್ಮ ವಾದವೇ? ಅವರಿಗೆ ಶಕ್ತಿ ಇದೆ. ಹೇಗಾದರೂ ಮಾಡಿ ಸಾಲವನ್ನು ಕಟ್ಟುತ್ತಾರೆ. ಅವರು ವ್ಯವಸಾಯ ಮಾಡುವುದಕ್ಕೆ ಸಾಲ ತೆಗೆದುಕೊಳ್ಳಬೇಕಾದರೆ ಏನು ಮಾಡಬೇಕು?

(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ವೆಲ್‌ನಿಂದ ಮಾತನಾಡುತ್ತಿದ್ದರು)

ಹಾಗಾದರೆ ನೀವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಏತಕ್ಕೆ ಮನ್ನಾ ಮಾಡಿಸಲಿಲ್ಲ? ಆಗ ಬರಗಾಲವು ಇತ್ತಲ್ಲಾ, ನೀವೇ ಅದನ್ನು ಮಾಡಿಸಬಹುದಾಗಿತ್ತಲ್ಲಾ? ನೀವು ಅಸಲನ್ನು ಮನ್ನಾ ಮಾಡಿಸಬಹುದಾಗಿತ್ತಲ್ಲಾ ನೀವು ಏನು ಮಾಡಿದ್ದೀರಿ? ನೀವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಬರಗಾಲವಿತ್ತಲ್ಲಾ? ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಬರಗಾಲವಿತ್ತು. ಆಗ ನೀವು ಮನ್ನಾ ಮಾಡಿಸಬಹುದಾಗಿತ್ತಲ್ಲಾ.

(ಗೊಂದಲ)

ಸುಮ್ಮನೆ ರಾಜಕಾರಣಕ್ಕೋಸ್ಕರ ಪ್ರಚಾರಕ್ಕೋಸ್ಕರ ಮಾತನಾಡಿದರೆ ಅದು ಎಲ್ಲರಿಗೂ ಅರ್ಥವಾಗುತ್ತದೆ. ಈ ರೀತಿ ರಾಜಕಾರಣ ಮಾಡುವುದು ಒಳ್ಳೆಯದಲ್ಲಾ. 2002–03ರಲ್ಲಿ ಬರಗಾಲವಿತ್ತು. ಆಗ ಕೇಂದ್ರದಲ್ಲಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದರು. 2003–04ನೇ ಸಾಲಿನಲ್ಲೂ ಕೂಡ ಬರಗಾಲವಿತ್ತು. ಆಗಲೂ ಕೂಡ ಪ್ರಧಾನ ಮಂತ್ರಿಗಳಾಗಿದ್ದವರು ಶ್ರೀ ವಾಜಪೇಯಿಯವರು, ಆವತ್ತು ಸಾಲ ಮತ್ತು ಬಡ್ಡಿ ಎರಡು ಮನ್ನಾ ಆಗಿದ್ದರೆ ನಾವು ನಿಮಗೆ ದೀರ್ಘದಂಡ ನಮಸ್ಕಾರವನ್ನು ಹೊಡೆಯುತ್ತಿದ್ದೇವು.

(ಗೊಂದಲ)

ನಾವು ಎಲ್ಲವನ್ನೂ ಮಾಡಿದ್ದೇವೆ ಆವತ್ತು ಏನೂ ಮಾಡದೇ ಈಗ ನೀವು ಬಾವಿಯಲ್ಲಿ ನಿಂತುಕೊಂಡು ಏತಕ್ಕೆ ಮಾತನಾಡುತ್ತಿದ್ದೀರಿ? ಈಗ ತಾವು ರಾಜಕಾರಣಕ್ಕೋಸ್ಕರವಾಗಿ ಮಾತನಾಡುತ್ತಿದ್ದೀರಿ? ಬಡ್ಡಿಯನ್ನು ನಾವು ರಾಜ್ಯ ಸರ್ಕಾರದ ಇತಿಮಿತಿಯೊಳಗಡೆ 500 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುತ್ತಿದ್ದೇವೆ. ಹೊಸದಾಗಿ 6 ಪರ್ಸೆಂಟ್ ದರದಲ್ಲಿ ಸಾಲ ಸಿಗುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಯಾರೂ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಆಗಲಿಲ್ಲ ಇವರಿಗೆ, ಈಗ ಇವರು ರಾಜಕಾರಣ ಮಾಡುವುದಕ್ಕೆ ಬಂದಿದ್ದಾರೆ. ನಾವು ಜುಲೈ 31ರವರೆಗೆ ರೈತರಿಗೆ ಸಹಾಯ ಮಾಡಬೇಕೆನ್ನುವ ಕಾರಣಕ್ಕೋಸ್ಕರವೇ ಇನ್ನೂ ಒಂದು ತಿಂಗಳ ಕಾಲ ಸಾಲ ಕಟ್ಟುವ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಮತ್ತೆ ಏಪ್ರಿಲ್ 1 ನೇ ತಾರೀಖಿನಿಂದ ಜುಲೈ 31ರವರೆಗೆ ತಗಲುವ ಆ ಬಡ್ಡಿಯನ್ನು ಸಹ ಮನ್ನಾ ಮಾಡುತ್ತಿದ್ದೇವೆ.

(ಬಿ.ಜೆ.ಪಿ ಸದಸ್ಯರು ಸದನದ ಬಾವಿಯಲ್ಲಿದ್ದುಕೊಂಡು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಯಾರು ರೈತ ವಿರೋಧಿಗಳು ಇದ್ದಾರೆ. ಅವರ ಹತ್ತಿರ ರೈತರ ಬಗ್ಗೆ ಪಾಠ ಕಲಿಯಬೇಕಾದಂತಹ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೇ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಕರ್ನಾಟಕ ವಿಧಾನ ಸಭೆ

ಶುಕ್ರವಾರ 1ನೇ ಜುಲೈ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.24 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ವಿಷಯ : ಡಾ॥ ದಾಮೋದರ್ ಮೂಲ್ಕಿ
ಶ್ರೀ ಸುನೀಲ್‌ದತ್
ಶ್ರೀ ಸಿ.ವಿ ರಾಜಗೋಪಾಲ್
ಪ್ರೊ॥ ಸಿ.ಡಿ. ನರಸಿಂಹಯ್ಯ
ಶ್ರೀ ಬಿ.ಸಿ. ರಾಮಚಂದ್ರ ಶರ್ಮ
ಶ್ರೀ ನಾರಾಯಣರಾವ್ ಕೃಷ್ಣರಾವ್ ಕುಲಕರ್ಣಿ
ಶ್ರೀ ಹೆಚ್.ಡಿ. ಶೌರಿ ಅವರುಗಳ ನಿಧನದ ಬಗ್ಗೆ :

ಅಧ್ಯಕ್ಷರು :– ಈಗ ಸಂತಾಪ ಸೂಚನೆ.

ಸಂತಾಪ ಸೂಚನೆಗಳು

ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಡಾ॥ ದಾಮೋದರ್ ಮೂಲ್ಕಿ, ಲೋಕಸಭಾ ಸದಸ್ಯರು ಹಾಗೂ ಕೇಂದ್ರ ಸಚಿವರಾದ ಶ್ರೀ ಸುನೀಲ್‌ದತ್, ಪತ್ರಿಕೋದ್ಯಮಿ ಶ್ರೀ ಸಿ.ವಿ. ರಾಜಗೋಪಾಲ್, ಹಿರಿಯ ವಿದ್ವಾಂಸ ಶ್ರೀ ಸಿ.ಡಿ. ನರಸಿಂಹಯ್ಯ, ಆಧುನಿಕ ಕನ್ನಡ ಕಾವ್ಯ ಕ್ಷೇತ್ರದ ಅಗ್ರ ಪಂಕ್ತಿಯ ಕವಿ ಶ್ರೀ ಬಿ.ಸಿ. ರಾಮಚಂದ್ರಶರ್ಮ, ಖ್ಯಾತ ಸಾಹಿತಿ ಶ್ರೀ ನಾರಾಯಣ ಕೃಷ್ಣರಾವ್ ಮತ್ತು ಗ್ರಾಹಕ ಚಳುವಳಿ ಹೋರಾಟಗಾರ ಶ್ರೀ ಹೆಚ್.ಡಿ. ಶೌರಿ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಡಾ॥ ದಾಮೋದರ್ ಮೂಲ್ಕಿ

ಡಾ॥ ದಾಮೋದರ್ ಮೂಲ್ಕಿ ಅವರು 1930 ನೇ ಅಕ್ಟೋಬರ್ 8 ರಂದು ಮೂಲ್ಕಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವೈದ್ಯರಾಗಿದ್ದರು. ಮೂಲ್ಕಿ ಬಿಲ್ಲವ ಸಮಾಜ,